# ಕಡಲ ತೀರದ ವಿಸ್ಮಯ



ಈ ಜಾಗ ಇರುವುದು ತಮಿಳುನಾಡಿನ ರಾಮೇಶ್ವರ ಕಡಲ ತೀರದಲ್ಲಿ. ಇಲ್ಲಿಗೆ ಸುಳಿಯುವ ಅದೆಷ್ಟೊ ಪ್ರವಾಸಿಗರಿಗೆ ಕುತೂಹಲಕಾರಿಯಾಗಿ ಕಾಣುತ್ತದೆ ಚಿತ್ರದಲ್ಲಿನ ಕಟ್ಟಡ. ಇನ್ನು ಈ ಕಟ್ಟಡದ್ದು ಕಪ್ಪು ಶಿಲೆಗಳಿಂದ ಕೂಡಿದ ರಚನೆ. ಸಮುದ್ರ ತೀರದಲ್ಲಿ ಒಂಟಿಯಾಗಿ ಆಕರ್ಷಿಸುವ ಈ ರಚನೆ ನೋಡುಗರನ್ನು ತನ್ನತ್ತ ಸೆಳೆಯುತ್ತದೆ. ಇದನ್ನು ನೋಡಿದ ಕೂಡಲೇ ಏನಿದು, ಇಲ್ಲೇಕೆ ಈ ಕಡಲ ತೀರದಲ್ಲಿ ವಿಸ್ಮಯ ನೆಲೆಗೊಂಡಿದೆ ಎನಿಸದಿರದು. ಹತ್ತಿರ ಹೋಗಿ ಗಮನಿಸಿದಾಗ ಇದರ ಎರಡೂ ಪಾರ್ಶ್ವದಲ್ಲಿ ಮಕ್ಕಳಿಗೆ ಜಾರು ಬಂಡೆ ಆಡಲು ಕಟ್ಟಿದ್ದೆಂದು ಗೊತ್ತಾಯಿತು. ಆದರೆ ಇದೀಗ ಶಿಥಿಲವಾಗಿ ಅನುಪಯುಕ್ತವಾಗಿದೆ. ಆದರೂ ಎಲ್ಲರನ್ನೂ ನೋಡಬನ್ನಿ ನನ್ನನ್ನು ಎಂದು ಕರೆಯುವಂತೆ ಕಾಣುತ್ತಿದೆ.

**–ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು**

# ಬಲು ಅಪರೂಪ ಮುಂಡಿಗೆ ಕಾಯಿ

ಮೇಲ್ನೋಟಕ್ಕೆ ಪುಟ್ಟ ಹಲಸಿನಂತೆ ಗೋಚರಿಸುವ ಈ ಕಾಯಿಯನ್ನು ಕರಾವಳಿಯ ತುಳುನಾಡಿನಲ್ಲಿ 'ಮುಂಡಿಗೆ ಕಾಯಿ' ಎಂದು ಕರೆಯುತ್ತಾರೆ. ತುಳುವಿನಲ್ಲಿ ಮುಂಡೇವು ಎನ್ನುತ್ತಾರೆ. 'ಸ್ಕ್ರೂ ಪೈನ್' ಎಂಬ ಸಸ್ಯಶಾಸ್ತ್ರೀಯ ಹೆಸರುಳ್ಳ ಇದು ಸಸ್ಯ ಪಾಂಡನಸ್ ಕುಲಕ್ಕೆ ಸೇರಿದೆ. ಈ ಕಾಯಿ/ಫಲ ಸಾಧಾರಣ ಅನಾನಸ್ ಗಾತ್ರದಲ್ಲಿದ್ದು ಮೇಲ್ಮೈಯು ಗಟ್ಟಿ ಚಿಪ್ಪಿನ ಕೋಶಗಳು ಸೇರಿಕೊಂಡಿರುವಂತೆ ಕಾಣಿಸುತ್ತದೆ. ಕರಾವಳಿ ಭಾಗದಲ್ಲಿ ಕೆಲವರು ಫಲದೊಳಗಿನ ತುರಿಯನ್ನು (ಪಲ್ಪ್) ಹಸಿವು ತಣಿಸಲು ತಿನ್ನುತ್ತಾರೆ. ಇದು ಸಾಮಾನ್ಯವಾಗಿ ಮುಖ್ಯ ಆಹಾರವಲ್ಲ.



ಪೆಸಿಫಿಕ್ ದ್ವೀಪಗಳಲ್ಲಿ ಇದನ್ನು ಬೇಯಿಸಿ ಅಥವಾ ಒಣಗಿಸಿ ತಿನ್ನುವ ಪದ್ಧತಿ ಇದೆಯಂತೆ. ಮುಂಡಿಗೆ ಗಿಡದ ಉದ್ದ, ಗಟ್ಟಿ, ಮುಳ್ಳಿನಂಚುಗಳಿರುವ ಎಲೆಗಳನ್ನು ಒಣಗಿಸಿ ಚಾಪೆ, ಚೀಲ, ಹಾಸು, ಕುಡಿಕೆಗಳನ್ನು ಹೆಣೆಯುತ್ತಾರೆ. ಮುಳ್ಳು ತೆಗೆದ ಎಲೆಗಳನ್ನು ಬಿಸಿನೀರಿನಲ್ಲದ್ದಿ ತೆಗೆದು ಕಡುಬು (ಮೂಡೆ) ಮಾಡಲು ಹೊದಿಕೆಯಾಗಿ ಬಳಸುತ್ತಾರೆ. ಸಸ್ಯದ ಬಲವಾದ ಬೇರುಗಳನ್ನು ಬೇಲಿ ಹಾಕಲು ಉಪಯೋಗಿಸುತ್ತಾರೆ. ಕಾಂಡವನ್ನು ಕತ್ತರಿಸಿ ಒಂದು ಬದಿ ಜಜ್ಜಿ ಸುಣ್ಣ ಬಳಿಯಲು ಬ್ರಶ್‌ನಂತೆ ಬಳಸುತ್ತಾರೆ. ಕೆಲವು ಜನಪದ ವೈದ್ಯಶಾಸ್ತ್ರದಲ್ಲಿ ಬೇರುಗಳಿಂದ ಜ್ವರ, ಚರ್ಮವ್ಯಾಧಿಗಳಿಗೆ ಔಷಧಿ ತಯಾರಿಸಲಾಗುತ್ತದೆ. ಮುಂಡಿಗೆಯನ್ನು ಜಿರಳೆಗಳಿಗೆ ಪ್ರತಿಬಂಧಕವಾಗಿಯೂ ಬಳಸಲಾಗುತ್ತದೆ.

ಮುಂಡಿಗೆ ಸಸ್ಯಗಳ ಹಿಂಡು ಹೊಳೆಯ ದಂಡೆಯಲ್ಲಿ ಪೊದೆಯಂತೆ ಬೆಳೆಯುತ್ತದೆ. ಹೊಳೆದಂಡೆಯ ಮಣ್ಣು ಸವಕಳಿಯಾಗದಂತೆ ನೈಸರ್ಗಿಕ ರಕ್ಷಣಾಗೋಡೆಯಾಗಿ ಮತ್ತು ಅನೇಕ ಜೀವಿಗಳ ವಾಸಸ್ಥಾನವಾಗಿ ಇದು ಸಹಕಾರಿಯಾಗಿದೆ. ಮುಂಡಿಗೆಯ ಬೀಜಗಳು ಹೊಳೆಯ ನೀರಿನಿಂದ, ಪಕ್ಷಿ, ಸಸ್ತನಿ ಮತ್ತಿತರ ಪ್ರಾಣಿಗಳಿಂದ ಹರಡುತ್ತವೆ. ಇದು ಕೇದಿಗೆಯನ್ನು ಹೋಲುವುದಾದರೂ ಕೇದಿಗೆ ಮತ್ತು ಮುಂಡಿಗೆಗಳಲ್ಲಿ ವ್ಯತ್ಯಾಸವಿದೆ. ಮುಂಡಿಗೆಯಲ್ಲಿ ಪರಿಮಳದ ಹೂವು ಆಗುವುದಿಲ್ಲ ಹಾಗೂ ಕೇದಿಗೆಯಲ್ಲಿ ಯಾವುದೇ ಕಾಯಿ ಬಿಡುವುದಿಲ್ಲ. ಇದರ ಕಾಯಿಗಳು ಅಪರೂಪಕ್ಕೊಮ್ಮೆ ಹಳ್ಳಿಗಳ ಹೊಳೆಬದಿಗಳಲ್ಲಿ ಕಾಣಸಿಗುತ್ತವೆ.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**

# ಮನೆಯೊಳಗೆ ವಾಸಿಸುವ ಕಪ್ಪೆ

ನೆಲ ಮತ್ತು ನೀರಿನಲ್ಲಿ ವಾಸಿಸುವ ಹೆಚ್ಚಿನ ಕಪ್ಪೆಗಳು ಉಭಯವಾಸಿಗಳು. ಮರಗಪ್ಪೆ ಗಿಡಮರಗಳಲ್ಲಿ ಆಶ್ರಯ ಪಡೆದಿರುತ್ತವೆ. ಕಪ್ಪೆಗಳಲ್ಲಿ ಹಲವಾರು ವಿಧಗಳಿವೆ. ಇವು ಶೀತರಕ್ತ ಪ್ರಾಣಿಗಳು. ಕರಾವಳಿ ಭಾಗದಲ್ಲಿ ಮಳೆಗಾಲ ಬಂತೆಂದರೆ ಅದೆಲ್ಲಿಂದಲೋ ಪ್ರತ್ಯಕ್ಷವಾಗಿ ವಟರುಗುಟ್ಟುವ ಗೋಂಕುರು ಕಪ್ಪೆಗಳ ಸಂತತಿ ಈಗ ಇಳಿಮುಖವಾಗಿದೆ. ಇವೆಲ್ಲದರ ನಡುವೆ ಕರಾವಳಿ ಭಾಗದಲ್ಲಿ ತಂಪನೆಯ ಕಾಲದಲ್ಲಿ ಮನೆಯೊಳಗೆ ಹೆಂಚಿನ ಮಾಡು, ಬಾಗಿಲ ತೋರಣ, ಕಪಾಟು, ಕಿಟಿಕಿ ಪರದೆ, ಬಟ್ಟೆಗಳ ಮಧ್ಯೆ, ಚಿತ್ರಪಟಗಳ ಹಿಂದೆ ಬೆಚ್ಚನೆಯ ಜಾಗ ಹುಡುಕಿ ವಾಸಿಸುವ ಕಪ್ಪೆಗಳೂ ಇವೆ. ಅರಿವಿಲ್ಲದೆ ಇವನ್ನು ಮುಟ್ಟಿದಾಗ ಚಂಗನೆ ಹಾರಿ ಭಯ ಹುಟ್ಟಿಸುವ ಜೊತೆಗೆ ಇವು ಮೃದುತ್ವದೊಂದಿಗೆ ಶೀತಲಸ್ಪರ್ಶದ ಅನುಭವ ಕೊಡುತ್ತವೆ.

ಎರಡರಿಂದ ಮೂರು ಇಂಚು ಉದ್ದವಿರುವ, ತಿಳಿ ಕಂದುಬಣ್ಣದಲ್ಲಿರುವ ಇವು ನಿರುಪದ್ರವಿಯಾಗಿದ್ದು ಮನೆಯೊಳಗಿನ ಕ್ರಿಮಿಕೀಟ, ನೊಣಗಳನ್ನು ತಿಂದು ಬದುಕುತ್ತವೆ. ತುಳುವಿನಲ್ಲಿ ಇದಕ್ಕೆ 'ಪನಿಗಪ್ಪೆ' ಎಂದು ಕರೆಯುತ್ತಾರೆ. ಮೊನ್ನೆ ಊರಿಗೆ ಹೋದಾಗ ಪ್ಲಾಸ್ಟಿಕ್ ಹೊದಿಕೆಯೊಳಗಿಂದ ಹಾರಿ ತಣ್ಣನೆ ಕೂತ ಈ ಪುಟಾಣಿ ಕಪ್ಪೆ ನನ್ನ ಮೊಬೈಲಿನಲ್ಲಿ ಸೆರೆಯಾಯಿತು.

**–ಧರ್ಮಾನಂದ ಶಿರ್ವ, ಬೆಂಗಳೂರು**

